not to be printed

2nd Cover

## ನೀನಾಸಮ್ ಸಂಸ್ಕೃತಿ ಶಿಬಿರ
## ಅಕ್ಟೋಬರ್ ೨೦೧೦

ಕಳೆದೆರಡು ದಶಕಗಳಿಂದ ನೀನಾಸಮ್ ಪ್ರತಿವರ್ಷವೂ ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದ್ದು ಅದರ ೨೦೧೦ರ ಅವತರಣಿಕೆ ಇದು. ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಶಿಬಿರವು 'ಹೊಸ ತಲೆಮಾರು: ಅಪೇಕ್ಷೆಗಳು ಮತ್ತು ಆತಂಕಗಳು' ಎಂಬ ವಿಷಯವನ್ನು ಕೇಂದ್ರೀಕರಿಸುತ್ತದೆ. ಭಾರತದಲ್ಲಿ ಇಂದು ಹೊಸ ತಲೆಮಾರಿನ ಜನವರ್ಗವೊಂದು ದೊಡ್ಡ ಪ್ರಮಾಣದಲ್ಲಿ ಪ್ರಾಬಲ್ಯಕ್ಕೆ ಬರುತ್ತಿದ್ದು ಅದರಿಂದಾಗಿ ನಮ್ಮ ಸಮಕಾಲೀನ ಅನುಭವ ಮತ್ತು ಅಭಿವ್ಯಕ್ತಿಯ ಮೇಲೆ ಆಗುತ್ತಿರುವ ಪರಿಣಾಮಗಳೇನು – ಎಂಬುದನ್ನು ತಾತ್ತ್ವಿಕವಾಗಿ ಮತ್ತು ನಿರ್ದಿಷ್ಟ ಕ್ಷೇತ್ರದ ಉದಾಹರಣೆಗಳ ಮೂಲಕ ಗುರುತಿಸುವುದು ಈ ಶಿಬಿರದ ಪ್ರಮುಖ ಕಾರ್ಯಸೂಚಿಯಾಗಿದೆ.

ಈ ವಿಷಯಕ್ಕೆ ಸಂಬಂಧಿಸಿ, ಹಲವು ಉಪನ್ಯಾಸ-ಚರ್ಚೆಗಳು ಈ ಶಿಬಿರದುದ್ದಕ್ಕೂ ನಡೆಯಲಿದ್ದು, ಡಾ. ಯು.ಆರ್. ಅನಂತಮೂರ್ತಿ, ಶ್ರೀಮತಿ ರಜನಿ ಭಕ್ಷಿ, ಶ್ರೀ ಮನು ಚಕ್ರವರ್ತಿ, ಶ್ರೀ ಶಿವ ವಿಶ್ವನಾಥನ್ ಶ್ರೀ ಸದಾನಂದ ಮೆನೊನ್, ಡಾ. ಗೋಪಾಲ ಗುರು, ಶ್ರೀ ಸಮೀಕ್ ಬಂದೋಪಾಧ್ಯಾಯ ಮೊದಲಾದ ಗಣ್ಯರು ಈ ಉಪನ್ಯಾಸ-ಸಂವಾದಗಳನ್ನು ನಡೆಸಲಿದ್ದಾರೆ. ಅಲ್ಲದೆ, ಹೊಸ ತಲೆಮಾರಿನ ಕಲೆ-ಸಂಸ್ಕೃತಿ ಕುರಿತಂತೆ – ಶ್ರೀ ಗಿರೀಶ ಕಾಸರವಳ್ಳಿ, ಶ್ರೀಮತಿ ವೈದೇಹಿ, ಶ್ರೀ ಸುಂದರ ಸಾರುಕ್ಕೈ, ಡಾ. ಓ.ಎಲ್. ನಾಗಭೂಷಣ ಸ್ವಾಮಿ, ಶ್ರೀ ಅತುಲ್ ತಿವಾರಿ, ಶ್ರೀ ವಿವೇಕ ಶಾನಭಾಗ, ಶ್ರೀ ಪ್ರಕಾಶ ಬೆಳವಾಡಿ, ಶ್ರೀ ಅಶೋಕ ಹೆಗಡೆ, ಶ್ರೀ ಎಸ್.ಆರ್. ವಿಜಯಶಂಕರ, ಶ್ರೀ ಅಭಯ ಸಿಂಹ ಮೊದಲಾದವರು ಮಾತಾಡಲಿದ್ದಾರೆ. ಇನ್ನು, ಯುವಸಾಹಿತ್ಯ ಸಂವಾದ ಮಾಲಿಕೆಯಲ್ಲಿ ಶ್ರೀ ಅರೀಫ್ ರಾಜಾ, ಶ್ರೀಮತಿ ಜ.ನಾ. ತೇಜಶ್ರೀ, ಶ್ರೀ ಫೀನಿಕ್ಸ್ ರವಿ, ಶ್ರೀ ಚ.ಹ. ರಘುನಾಥ, ಶ್ರೀ ಅಸಾರಾಮ್ ಲೋವ್ಟೆ, ಶ್ರೀ ರಾಮಗಣೇಶ ಕಮತಂ – ಮೊದಲಾದವರು ತಮ್ಮ ಕೃತಿಗಳನ್ನು ಎದುರಿಗಿಟ್ಟುಕೊಂಡು ಮಾತಾಡಲಿದ್ದಾರೆ. ಅಲ್ಲದೆ, ಈ ಶಿಬಿರದ ಹಗಲಿನ ಕಾರ್ಯಕ್ರಮಗಳ ಭಾಗವಾಗಿ ಕೆಲವು ರಂಗಪ್ರಯೋಗ ಪ್ರಾತ್ಯಕ್ಷಿಕೆಗಳು ಕೂಡಾ ಈ ಬಾರಿ ನಡೆಯಲಿದ್ದು 'ಕೋಪನ್‌ಹೇಗನ್', 'ಊರುಕೇರಿ' ಮತ್ತು 'ಕೊರಾ ಕೊಳಂಬು'ಗಳು ಅವುಗಳಲ್ಲಿ ಸೇರಿವೆ.

ಜತೆಗೆ, ಶ್ರೀ ಕೆ.ಎಸ್. ರಾಜಾರಾಮ್, ಶ್ರೀ ಎ.ಎನ್. ಮುಕುಂದ್, ಶ್ರೀ ಚನ್ನಕೇಶವ, ಶ್ರೀ ಚರಣ ಮೊದಲಾದವರು ಈ ಬಾರಿ ಛಾಯಾಗ್ರಹಣ ಮತ್ತು ರಂಗಕಲೆ ಕುರಿತು ಮುಂಜಾವಿನ ವಿಶೇಷ ತರಗತಿಗಳನ್ನು ನಡೆಸಲಿದ್ದಾರೆ. ಜತೆಗೆ, ಯುವ ಛಾಯಾಗ್ರಾಹಕರ ಒಂದು ಫೋಟೋ ಪ್ರದರ್ಶನವೂ ನಡೆಯಲಿದೆ. ಮತ್ತು, ಸಂಜೆಯ ಕಾರ್ಯಕ್ರಮಗಳ ವಿವರಗಳು ಮುದಿನ ಪುಟಗಳಲ್ಲಿವೆ.

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

not to be printed

3rd Cover

## NINASAM CULTURE COURSE 2010

The Culture Course has been one of Ninasam's major annual events for the last two decades. Held over 7 days every October, The Course is designed around a specific theme, and organised as a combination of special lectures on the theme, lecture-demonstration-discussions on appreciation of art forms like literature, theatre, film, music, dance, and so on -- all this during the day-sessions, and a series of cultural programmes in the evenings. The evening festival this year consists of the following programmes:

- **3rd October, Sunday:** Ninasam Tirugata Performance - ***Shoodra Tapaswi;*** Kaanada play by Kuvempu, Directed by Manjunatha L. Badigera.
- **4th October, Monday:** Ninasam Tirugata Performance - ***Othello;*** Kannada translation of Shakespeare's play by Nisar Ahmed; Directed by Jehan Maneckshaw
- **5th October, Tuesday:** Ninasam Performance - ***Agalida Alake;*** Based on Kalidasa's works; Directed by B.R. Venkataramana Aithala
- **6th October, Wednesday:** Karnatic Vocal Recital by **Vid. T.M. Krishna,** Chennai
- **7th October, Thursday:** Hindustani Vocal Recital by **Pt. Nagabhushana Hegde**
- **8th October, Friday:** Theatre performance by Perch, Chennai - **Ms. Meena,** Directed by Rajiv Krishnan
- **9th October, Saturday:** Classical Dance Performance by **Vid. Vaijayanthi Kashi,** and her troupe, Bangalore

**Ninasam, Heggodu, Sagara**
**Karnataka 577 417**

not to be printed

Page 1

**ನೀನಾಸಮ್ ಸಂಸ್ಕೃತಿ ಶಿಬಿರ**

**ಅಕ್ಟೋಬರ್ ೨೦೧೦**

**ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳು**

ಅಕ್ಟೋಬರ್ ೩, ಭಾನುವಾರ
**ತಿರುಗಾಟ ನಾಟಕ – ಶೂದ್ರ ತಪಸ್ವಿ**
ನಿರ್ದೇಶನ: ಮಂಜುನಾಥ ಎಲ್. ಬಡಿಗೇರ

ಅಕ್ಟೋಬರ್ ೪, ಸೋಮವಾರ
**ತಿರುಗಾಟ ನಾಟಕ – ಒಥೆಲೋ**
ನಿರ್ದೇಶನ: ಜೆಹಾನ್ ಮಣೆಕ್‌ಷಾ

ಅಕ್ಟೋಬರ್ ೫, ಮಂಗಳವಾರ
**ನೀನಾಸಮ್ ಬಳಗದ ನಾಟಕ – ಅಗಲಿದ ಅಲಕೆ**
ನಿರ್ದೇಶನ: ಬಿ.ಆರ್. ವೆಂಕಟರಮಣ ಐತಾಳ

ಅಕ್ಟೋಬರ್ ೬, ಬುಧವಾರ
**ಕರ್ನಾಟಕ ಸಂಗೀತ ಗಾಯನ**
**ವಿ। ಟಿ.ಎಂ. ಕೃಷ್ಣ**

ಅಕ್ಟೋಬರ್ ೭, ಗುರುವಾರ
**ಹಿಂದುಸ್ತಾನಿ ಗಾಯನ**
**ಪಂ। ನಾಗಭೂಷಣ ಹೆಗಡೆ**

ಅಕ್ಟೋಬರ್ ೮, ಶುಕ್ರವಾರ
ಆಹ್ವಾನಿತ ನಾಟಕ ಪ್ರದರ್ಶನ
**ಮಿಸ್ ಮೀನಾ**
**ಪರ್ಚ್, ಚೆನ್ನೈ - ತಂಡದ ಕಲಾವಿದರಿಂದ**

ಅಕ್ಟೋಬರ್ ೯, ಶನಿವಾರ
**ಶಾಸ್ತ್ರೀಯ ನೃತ್ಯ**
**ವಿ। ವೈಜಯಂತಿ ಕಾಶಿ**
ಶಾಂಭವಿ ನೃತ್ಯ ಶಾಲೆ, ಬೆಂಗಳೂರು

**ಪ್ರತಿದಿನ ಸಂಜೆ ೭ ಗಂಟೆಗೆ**
**ಶಿವರಾಮ ಕಾರಂತ ರಂಗಮಂದಿರ, ಹೆಗ್ಗೋಡು**
ಪ್ರವೇಶ: ರೂ. ೧೫೦ (ಎಲ್ಲ ದಿನಕ್ಕೆ)
ರೂ. ೩೦ (ಪ್ರತಿದಿನ)

not to be printed

Page 2

**ಅಕ್ಟೋಬರ್ ೩ ಭಾನುವಾರ**

photo to be printed here
see cd for the photo with this file no.

**03CC10**

ತಾಲೀಮಿನ ಚಿತ್ರ

ತಿರುಗಾಟ ನಾಟಕ

## ಶೂದ್ರತಪಸ್ವಿ

ಕುವೆಂಪು ಅವರ ನಾಟಕ ಆಧರಿಸಿದ ಪ್ರಯೋಗ

**ನಿರ್ದೇಶನ: ಮಂಜುನಾಥ ಎಲ್. ಬಡಿಗೇರ**

ಕುವೆಂಪು ಅವರು ೧೯೪೦ರಲ್ಲಿ ರಚಿಸಿದ ಈ ಕನ್ನಡ ನಾಟಕವು ಕನ್ನಡ ನಾಡಿನ ಸಾಹಿತ್ಯ-ಸಾಂಸ್ಕೃತಿಕ ವಲಯಗಳಲ್ಲಿ ವಿಶಾಲವ್ಯಾಪ್ತಿಯ ಒಂದು ವಾಗ್ವಾದಕ್ಕೆ ಕಾರಣವಾಯಿತು ಮಾತ್ರವಲ್ಲ, ಪುರಾಣಗಳನ್ನು ಪುನರ್‌ವ್ಯಾಖ್ಯಾನ ಮಾಡುವ ಒಂದು ಪರಂಪರೆಗೂ ಅದು ಪ್ರೇರಕವಾಯಿತು. ಉತ್ತರ ರಾಮಾಯಣದ ಶಂಭೂಕವಧೆಯ ಪ್ರಸಂಗವನ್ನು ಎದುರಿಗಿಟ್ಟುಕೊಂಡು ಈ ನಾಟಕವು ಆಧುನಿಕ ದೃಷ್ಟಿಕೋನದಿಂದ ಆ ಕಥೆಯ ಒಂದು ಪುನರ್ ವ್ಯಾಖ್ಯಾನ ಮಾಡುತ್ತದೆ. ರಾಮ ಪಟ್ಟಾಭಿಷೇಕ ಮತ್ತು ಸೀತಾಪರಿತ್ಯಾಗದ ಬಳಿಕ ನಡೆಯುವ ಈ ರಾಮಾಯಣ ಕಥಾಭಾಗದಲ್ಲಿ, ಶೂದ್ರನೊಬ್ಬ ತಪಸ್ಸು ಮಾಡುತ್ತಿರುವುದರಿಂದ ಬ್ರಾಹ್ಮಣಕುಮಾರನೊಬ್ಬ ಅಕಾಲದಲ್ಲಿ ಮೃತನಾದನೆಂದು ರಾಮನ ಎದುರಿಗೆ ಫಿರ್ಯಾದು ಬರುತ್ತದೆ. ಆಗ ರಾಮ ತಪ್ಪಿತಸ್ಥನನ್ನು ಹುಡುಕಿ ದಂಡಿಸಲು ಬಂದಾಗ ಆತನಿಗೆ ತಪಸ್ಸು ಮಾಡುತ್ತಿರುವ ಶೂದ್ರಶಂಭೂಕ ಎದುರಾಗುತ್ತಾನೆ. ವಾಲ್ಮೀಕಿ ರಾಮಾಯಣದಲ್ಲಿ ಆತನನ್ನು ರಾಮನು ವಧೆ ಮಾಡುವುದಾಗಿ ಬಿಂಬಿಸಿರುವುದನ್ನು ಬದಲಾಯಿಸಿ ಪ್ರಸ್ತುತ ನಾಟಕವು ಬೇರೆ ಹಾದಿ ಹಿಡಿಯುತ್ತದೆ – ಇಲ್ಲಿ ಶಂಭೂಕನನ್ನುದ್ದೇಶಿಸಿ ರಾಮನು ಬಿಡುವ ಬಾಣವು ಬ್ರಾಹ್ಮಣನತ್ತಲೇ ತಿರುಗುತ್ತದೆ; ಮತ್ತು ಆ ಮೂಲಕ ನ್ಯಾಯ-ಅನ್ಯಾಯದ ಪಲ್ಲಟವೊಂದು ಇಲ್ಲಿ ಸಂಭವಿಸುತ್ತಿರುವುದನ್ನು ಈ ಕೃತಿಸೂಚಿಸುತ್ತದೆ.

ಕಾವ್ಯಗಂಧಿ ಭಾಷೆಯ ಈ ನಾಟಕಕ್ಕೆ ಸಂವಾದಿಯಾದ ಕಾವ್ಯರೂಪಿ ರಂಗಭಾಷೆಯನ್ನು ಹುಡುಕುವ ಪ್ರಯತ್ನವು ಪ್ರಸ್ತುತ ಪ್ರಯೋಗದಲ್ಲಿದೆ.

**ಸಂಜೆ ೭ ಗಂಟೆಗೆ**

not to be
printed
Page 3

**ಅಕ್ಟೋಬರ್ ೪ ಸೋಮವಾರ**

photo to be printed here
see cd for the photo with this file no.

**04CC10**

ತಿರುಗಾಟ ನಾಟಕ

## ಒಥೆಲೋ

ಶೇಕ್‌ಸ್ಪಿಯರ್‌ನ ನಾಟಕ ಆಧಾರಿತ
ಕನ್ನಡ ಅನುವಾದ: ನಿಸಾರ್ ಅಹಮದ್
**ನಿರ್ದೇಶನ: ಜೆಹಾನ್ ಮಣೆಕ್‌ಷಾ**

ಸುಮಾರು ನಾನ್ನೂರು ವರ್ಷಗಳ ಹಿಂದೆ ರಚಿತವಾದ ಶೇಕ್‌ಸ್ಪಿಯರನ ಈ ಪ್ರಸಿದ್ಧ ಕೃತಿಯು ಸಾರ್ವಕಾಲಿಕವಾದ ಪ್ರೀತಿ-ಅಸೂಯೆಗಳ ಕಥೆಯನ್ನು ಹೇಳುತ್ತಲೇ ಹಲವು ಬಗೆಯಿಂದ ಇವತ್ತಿಗೂ ಅರ್ಥವತ್ತಾಗಿ ಗೋಚರಿಸುವ ಸಮಕಾಲೀನತೆಯನ್ನು ತನ್ನೊಳಗಿಟ್ಟುಕೊಂಡಿದೆ. ವೆನಿಸ್ಸಿನ ಸೇನಾನಾಯಕ ಒಥೆಲೋ ತನ್ನ ಸಹವರ್ತಿ ಇಯಾಗೋನ ಕುತಂತ್ರಕ್ಕೆ ಒಳಗಾಗುವುದು, ಅದರ ಪರಿಣಾಮವಾಗಿ ತನ್ನ ಪತ್ನಿಯ ಶೀಲವನ್ನು ಶಂಕಿಸಿ ಆಕೆಯ ಹತ್ಯೆ ಮಾಡುವುದು ಮತ್ತು, ಕಡೆಗೆ ತಾನೂ ಆತ್ಮಹತ್ಯೆ ಮಾಡಿಕೊಳ್ಳುವುದು – ಇದು ಈ ದುರಂತನಾಟಕದ ಸ್ಥೂಲವಾದ ಕಥಾಸೂತ್ರ. ಒಂದು ಕಡೆಯಿಂದ ಈ ಕೃತಿಯು ಪ್ರೀತಿ, ಕುಟಿಲತೆ, ಅಸೂಯೆ ಮೊದಲಾದ ಮೂಲ ಮನುಷ್ಯಭಾವಗಳ ಸಂಕೀರ್ಣ ಸಂಘರ್ಷವನ್ನು ಚಿತ್ರಿಸುತ್ತದೆ; ಮತ್ತು ಅಂಥ ನಾಟಕೀಯ ಮುಖಾಮುಖಿಯಲ್ಲಿ ಹುಟ್ಟುವ ಭಾವೋದ್ದೀಪಕ ಕಥೆಯನ್ನು ನಮ್ಮೆದುರಿಗಿಡುತ್ತದೆ. ಜತೆಜತೆಗೇ ಈ ನಾಟಕವು ಅವ್ಯಕ್ತವಾಗಿ ಅಡಗಿರುವ ಜನಾಂಗದ್ವೇಷ ಮತ್ತು ಪುರುಷಾಹಂಕಾರಗಳ ಕಥನವನ್ನೂ ಕಟ್ಟುತ್ತ, ಆ ಮೂಲಕ ಇವತ್ತಿನ ಕಾಲದ ಸಾಮಾಜಿಕ ರಾಜಕಾರಣದ ವಾಸ್ತವಗಳಿಗೂ ಕನ್ನಡಿ ಹಿಡಿಯುತ್ತದೆ – ಇವು ಈ ನಾಟಕವು ವ್ಯಂಜಿಸುವ ಬಹುವ್ಯಾಪ್ತಿಯ ಅರ್ಥವಿಸ್ತಾರಗಳಿಗೆ ಸೂಚಕವಾಗುವಂಥ ಎರಡು ತುದಿಗಳು.

ಇಂಥ ಒಂದು ಮಹತ್ಕೃತಿಯನ್ನು ನಮ್ಮ ಕಾಲಕ್ಕೆ ಸಲ್ಲುವ ಒಂದು ಪುನರ್ ಕಥನದ ಮೂಲಕ ಸಮಕಾಲೀನಗೊಳಿಸುವ ಪ್ರಯತ್ನ ಈ ಪ್ರಯೋಗದ್ದು.

**ಸಂಜೆ ೭ ಗಂಟೆಗೆ**

not to be
printed
Page 4

**ಅಕ್ಟೋಬರ್ ೫ ಮಂಗಳವಾರ**

photo to be printed here
see cd for the photo with this file no.

**05CC10**

ನೀನಾಸಮ್ ನಾಟಕ

## ಅಗಲಿದ ಅಲಕೆ

ಕಾಳಿದಾಸನ ಕೃತಿಗಳನ್ನು ಸಂಕಲಿಸಿದ ರಂಗರೂಪ
**ರಂಗಪಠ್ಯ ಮತ್ತು ನಿರ್ದೇಶನ:ಬಿ.ಆರ್. ವೆಂಕಟರಮಣ ಐತಾಳ**

ಕಾಳಿದಾಸನ ಕಾವ್ಯ-ನಾಟಕಗಳಲ್ಲಿ ಮತ್ತೆಮತ್ತೆ ಕಾಣಿಸಿಕೊಳ್ಳುವ ವಸ್ತು – ಅಗಲಿಕೆ. ‘ಅಗಲಿದ ಅಲಕೆ’ಯು ಕಾಳಿದಾಸನ ಕೃತಿಗಳಿಂದ ಆಯ್ದ ಇಂಥ ಅಗಲಿಕೆಯ ಕಥನಗಳ ಒಂದು ಸಂಯೋಜನೆ. ಅಗಲಿಕೆಯ ಕಥನಗಳಿಗೆಲ್ಲ ಮೂಲಸ್ರೋತವೋ ಎಂಬಂತಿರುವ ಕಾಳಿದಾಸನ ‘ಮೇಘದೂತ’ದಿಂದ ಆರಂಭವಾಗಿ ಅದರಿಂದಲೇ ಮುಗಿಯುವ ಈ ರಂಗಾವತರಣಿಕೆಯಲ್ಲಿ ಆತನ ಎಲ್ಲ ಕಾವ್ಯ-ನಾಟಕಗಳ ಭಾಗಗಳೂ ಮಿಳಿತಗೊಂಡಿವೆ – ನಾನಾ ಬಗೆಯ ವಿಯೋಗಕೇಂದ್ರಿತ ಸನ್ನಿವೇಶಗಳು ಕೂಡಿ ಈ ಕೃತಿ ಹುಟ್ಟಿದೆ. ‘ಮೇಘದೂತ’ವು ಆರಂಭವಾಗುವುದು ‘ಸ್ವಾಧಿಕಾರದಿಂದ ಪ್ರಮತ್ತನಾಗಿ’ ಕರ್ತವ್ಯಚ್ಯುತಗೊಂಡು, ಒಡೆಯನಿಂದ ಶಪಿತನಾಗಿ ವಿಯೋಗಕ್ಕೊಳಗಾಗಿ ದುಃಖಿಸುವ ಯಕ್ಷನ ಚಿತ್ರದಿಂದ. ವಿಶೇಷವೆಂದರೆ, ಕಾಳಿದಾಸನ ಎಲ್ಲ ನಾಯಕನಾಯಿಕೆಯರ ಕಥೆಯೂ ಇದೇ – ದುಷ್ಯಂತ ಶಕುಂತಲೆಯರೂ ಕೂಡಿದಂತೆ ಅವರೆಲ್ಲರೂ ‘ಸ್ವಾಧಿಕಾರಪ್ರಮತ್ತ’ರಾಗಿ ವಿಯೋಗವನ್ನು ಅನುಭವಿಸುತ್ತ, ಆ ಅನುಭವದ ಮೂಲಕವೇ ಹೊಸ ಅರಿವಿನ ಪ್ರತ್ಯಭಿಜ್ಞಾನದ ಹೊಸ್ತಿಲಿಗೆ ತಲುಪುತ್ತಾರೆ. ಕಾಳಿದಾಸಕೃತಿಗಳ ಇಂಥ ಮೂಲಸೂತ್ರವೊಂದನ್ನು ಮುಂದಿಟ್ಟುಕೊಂಡು ಹೀಗೆ, ಈ ರಂಗಕೃತಿಯಲ್ಲಿ ಅದನ್ನೊಂದು ನೆಯ್ಗೆಯಾಗಿ ಹೆಣೆಯುವ ಪ್ರಯೋಗ ಮಾಡಲಾಗಿದೆ.

ಹೆಗ್ಗೋಡು ಸುತ್ತಮುತ್ತಲಿನ ನೀನಾಸಮ್ ಬಳಗವು ವರ್ಷಕ್ಕೊಮ್ಮೆ ಕೂಡಿ ತಯಾರಿಸುವ ನಾಟಕಸರಣಿಯಲ್ಲಿ ಬಂದ ೨೦೧೦ರ ಪ್ರಯೋಗ ಇದು.

**ಸಂಜೆ ೭ ಗಂಟೆಗೆ**

not to be
printed
↓
Page 5

## ಅಕ್ಟೋಬರ್ ೬ ಬುಧವಾರ

photo to be printed here
see cd for the photo with this file no.
↓
**06CC10**

ಕರ್ನಾಟಕ ಸಂಗೀತ ಗಾಯನ

### ವಿ। ಟಿ.ಎಂ. ಕೃಷ್ಣ

**ಚೆನ್ನೈ**

ತಮ್ಮ ವಿದ್ವತ್ಪೂರ್ಣ ಪ್ರಸ್ತುತಿ, ಶಾರೀರಸಂಪದ ಮತ್ತು ಸತತ ಆವಿಷ್ಕಾರಗಳ ಮೂಲಕ ಕರ್ನಾಟಕ ಸಂಗೀತದ ಗಾಯಕರಲ್ಲಿ ಇಂದು ಅತ್ಯಂತ ಪ್ರಸಿದ್ಧ ಕಲಾವಿದರಲ್ಲೊಬ್ಬರಾಗಿ ಬೆಳೆದವರು ವಿ। ಟಿ.ಎಂ. ಕೃಷ್ಣ. ತಮ್ಮ ಎಳೆಯ ವಯಸ್ಸಿನಲ್ಲಿಯೇ ವಿ। ಬಿ. ಸೀತಾರಾಮ ಶರ್ಮ ಅವರಿಂದ ಸಂಗೀತ ಶಿಕ್ಷಣ ಪಡೆಯಲಾರಂಭಿಸಿದ ಕೃಷ್ಣ ಅವರು ಮುಂದೆ ಕರ್ನಾಟಕ ಸಂಗೀತ ಸಂಪ್ರದಾಯದ ದಿಗ್ಗಜರೆನ್ನಿಸಿಕೊಂಡ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರ ಶಿಷ್ಯರಾಗಿ ಹಲವು ವರ್ಷ ಅಭ್ಯಾಸ ಮಾಡಿದರು.

ಕಳೆದ ಹತ್ತಾರು ವರ್ಷಗಳಿಂದೀಚೆಗೆ ದೇಶವಿದೇಶಗಳ ಹಲವು ಪ್ರಸಿದ್ಧ ಸಂಗೀತಸಭೆಗಳಲ್ಲಿ ಕಾರ್ಯಕ್ರಮ ನೀಡುತ್ತ ಬಂದಿರುವ ವಿ। ಕೃಷ್ಣ ಅವರು ಸಂಗೀತದ ಬಗ್ಗೆ ಸಂಶೋಧನೆ ಮತ್ತು ಬರವಣಿಗೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯೂ ಕೂಡಿದಂತೆ ಹಲವಾರು ಗಣ್ಯ ಪುರಸ್ಕಾರಗಳು ಇವರಿಗೆ ಸಂದಿವೆ. ಇವರ ಗಾಯನದ ಹಲವಾರು ಧ್ವನಿಮುದ್ರಣಗಳು ಮತ್ತು ಸಂಗೀತ ಕುರಿತ ಇವರ ಹಲವು ಬರಹಗಳು ಈಗಾಗಲೇ ಪ್ರಕಟಗೊಂಡಿವೆ. ಕರ್ನಾಟಕ ಸಂಗೀತಕ್ಷೇತ್ರದೊಳಕ್ಕೆ ಯುವ ಮತ್ತು ಗ್ರಾಮೀಣ ಪ್ರತಿಭೆಗಳನ್ನು ಆಕರ್ಷಿಸುವ ಮತ್ತು ಅವರನ್ನು ತರಬೇತುಗೊಳಿಸುವ ಗುರಿಯಿಟ್ಟುಕೊಂಡು ಇವರು ಪ್ರಸ್ತುತ ಹಲವು ಬಗೆಯ ಕಾರ್ಯಯೋಜನೆಗಳನ್ನು ನಡೆಸುತ್ತಿದ್ದಾರೆ.

ಕಾರ್ಯಕ್ರಮದ ಸಹಕಲಾವಿದರು – ಶ್ರೀಮತಿ ಚಾರುಲತಾ ರಾಮಾನುಜಮ್ (ವಯೋಲಿನ್) ಮತ್ತು ಶ್ರೀ ಎಚ್. ಎಸ್. ಸುಧೀಂದ್ರ (ಮೃದಂಗಮ್).

**ಸಂಜೆ ೭ ಗಂಟೆಗೆ**

not to be
printed
↓
Page 6

## ಅಕ್ಟೋಬರ್ ೭ ಗುರುವಾರ

photo to be printed here
see cd for the photo with this file no.
↓
**07CC10**

ಹಿಂದುಸ್ತಾನಿ ಗಾಯನ

### ಪಂ। ನಾಗಭೂಷಣ ಹೆಗಡೆ

ಮತ್ತು ಸಹಕಲಾವಿದರಿಂದ

ತಮ್ಮ ಎಳೆವಯಸ್ಸಿನಲ್ಲಿಯೇ ಹಿಂದುಸ್ತಾನಿ ಗಾಯನದಿಂದ ಆಕರ್ಷಿತರಾದ ನಾಗಭೂಷಣ ಹೆಗಡೆಯವರು ಪ್ರಾರಂಭದಲ್ಲಿ ಶಿರಸಿಯ ಪಂ. ಎಂ.ಪಿ. ಹೆಗಡೆ, ಧಾರವಾಡದ ಪಂ. ಶ್ರೀಪಾದ ಹೆಗಡೆ ಮತ್ತು ಮುಂಬಯಿಯ ಪಂ. ರಾಜಾ ಕಾಳೆ ಅವರಿಂದ ಸಂಗೀತ ಮಾರ್ಗದರ್ಶನ ಪಡೆದು ಬಳಿಕ ಹಲವು ವರ್ಷಗಳ ಕಾಲ ಕಿರಾಣಾ ಘರಾಣೆಯ ಪ್ರಸಿದ್ಧ ಗಾಯಕ ಪಂ. ಗಣಪತಿ ಭಟ್ ಹಾಸಣಗಿ ಅವರ ಬಳಿ ಶಿಷ್ಯವೃತ್ತಿ ನಡೆಸಿದರು.

ತಮ್ಮ ಗಾಢ ಮತ್ತು ಮಧುರ ಧ್ವನಿಯನ್ನು ಸತತವಾದ ಪರಿಶ್ರಮದ ಮೂಲಕ ರೂಪುಗೊಳಿಸಿಕೊಂಡಿರುವ ನಾಗಭೂಷಣ ಹೆಗಡೆ ಅವರು ಈಗಾಗಲೇ ಹಲವು ಕಾರ್ಯಕ್ರಮಗಳನ್ನು ನೀಡಿ ಪ್ರಸಿದ್ಧಿಗೆ ಬರತೊಡಗಿರುವ ಯುವ ಕಲಾವಿದ. ಕುಂದಗೋಳದ ಸವಾಯಿ ಗಂಧರ್ವ ಉತ್ಸವ, ಹಾಸಣಗಿಯ ರಾಜಗುರು ಸ್ಮೃತಿ ಸಂಗೀತ ಸಮ್ಮೇಳನ, ಧಾರವಾಡದ ರಾಜಗುರು ಸಂಗೀತ ಸಭಾ, ಮುಂಬಯಿಯ ಖಾನ್ ಸಾಹೇಬ್ ಅಲ್ಲಾದಿಯಾ ಸಾಬ್ ಸಂಗೀತಸಭಾ ಮೊದಲಾದ ಕಡೆಗಳಲ್ಲಿ ಇವರ ಕಾರ್ಯಕ್ರಮಗಳು ಜರುಗಿವೆ. ಆಕಾಶವಾಣಿಯ ಮಾನ್ಯತೆ ಪಡೆದ ಕಲಾವಿದರೂ ಆಗಿರುವ ಇವರ ಧ್ವನಿಮುದ್ರಣಗಳು ಪ್ರಕಟಗೊಂಡಿವೆ. ಪ್ರಸ್ತುತ ಇವರು ಸಾಗರ ಮತ್ತು ಬೆಂಗಳೂರುಗಳಲ್ಲಿ ಸಂಗೀತ ಶಿಕ್ಷಕರಾಗಿ ಕೆಲಸ ಮಾಡುತ್ತ ತಮ್ಮ ಸಂಗೀತೋದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ.

ಈ ಕಾರ್ಯಕ್ರಮದಲ್ಲಿ ಸಹಕಲಾವಿದರು – ಶ್ರೀ ಗಣೇಶ ಗುಂಟಕಲ್ (ತಬಲಾ) ಮತ್ತು ಶ್ರೀ ಮಧುಸೂಧನ ಭಟ್ (ಹಾರ್ಮೋನಿಯಮ್).

**ಸಂಜೆ ೮.೩೦ ಗಂಟೆಗೆ**

not to be printed
Page 7

**ಅಕ್ಟೋಬರ್ ೮ ಶುಕ್ರವಾರ**

photo to be printed here
see cd for the photo with this file no.

# 08CC10

ಆಹ್ವಾನಿತ ನಾಟಕ

## ಮಿಸ್ ಮೀನಾ

ಚೆನ್ನೈನ ಪರ್ಚ್ ತಂಡದ ಕಲಾವಿದರಿಂದ

ಭಾಷೆ: ಇಂಗ್ಲಿಷ್ ಮತ್ತು ಹಲವು ದೇಶಭಾಷೆಗಳು

ನಿರ್ದೇಶನ: ರಾಜೀವ ಕೃಷ್ಣನ್

೨೦೦೬ರಲ್ಲಿ ಚೆನ್ನೈಯಲ್ಲಿ ಒಂದು ಹವ್ಯಾಸಿ ಕಲಾಸಂಘಟನೆಯಾಗಿ ಸ್ಥಾಪನೆಯಾದ ಪರ್ಚ್ (ಪರ್ಫಾರ್ಮರ್ಸ್ ಫ್ರಮ್ ಚೆನ್ನೈ) ಕಳೆದ ನಾಲ್ಕು ವರ್ಷಗಳ ತನ್ನ ರಂಗಪ್ರಯೋಗಗಳ ಮೂಲಕ ದೇಶಾದ್ಯಂತ ಹೆಸರು ಮಾಡಿರುವ ರಂಗತಂಡ. ನಾಟಕಪ್ರಯೋಗವೆ ಅಲ್ಲದೆ ಈ ತಂಡವು ಚೆನ್ನೈನಲ್ಲಿ ನಾಟಕೋತ್ಸವ ಮೊದಲಾದ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ಜರ್ಮನ್ ನಾಟಕಕಾರ ಡ್ಯುರೆನ್‌ಮಟ್‌ನ ಪ್ರಸಿದ್ಧ ಕೃತಿ 'ದಿ ವಿಸಿಟ್' ನಿಂದ ಸ್ಫೂರ್ತಗೊಂಡು ರಚಿತವಾದ ರಂಗಪಠ್ಯ 'ಮಿಸ್ ಮೀನಾ'. ಪೀಚಮ್‌ಪುರವೆಂಬ ಹಳ್ಳಿಯಲ್ಲಿ ಹುಟ್ಟಿ ನಗರಕ್ಕೆ ಹೋದ ಆಶಾ ಎಂಬಾಕೆ ಅಲ್ಲಿ ಚಲನಚಿತ್ರ ನಟಿಯಾಗಿ ಮಿಸ್. ಮೀನಾ ಎಂದು ಪ್ರಸಿದ್ಧಳಾಗಿದ್ದಾಳೆ; ಈಗ ಅವಳು ತನ್ನ ಕಟ್ಟಕಡೆಯ ಸಿನೆಮಾವನ್ನು ಚಿತ್ರೀಕರಿಸಲಿಕ್ಕಾಗಿ ಈ ಹಳ್ಳಿಗೆ ಮರಳಿದ್ದಾಳೆ – ಇದು ನಾಟಕದ ಕೇಂದ್ರ ಘಟನೆ. ಈ ನಡುವೆ ಪೀಚಮ್‌ಪುರ ಬಡತನದ ಬೇಗೆಯಲ್ಲಿ ಸಿಲುಕಿದೆ; ಹಾಗಾಗಿ ಮೀನಾಳಿಂದಾದರೂ ಊರು ಉದ್ಧಾರವಾದೀತೆಂದು ಹಳ್ಳಿ ಕಾಯುತ್ತದೆ. ಆ ಸಹಾಯಕ್ಕಾಗಿ ಮೀನಾಳ ಮಾಜಿ ಪ್ರಿಯಕರನ ಮೂಲಕ ಊರು ಆಕೆಗೆ ಮನವಿ ಸಲ್ಲಿಸುತ್ತದೆ. ಊರಿನ ಈ ಮನವಿಗೆ ಮೀನಾ ಸ್ಪಂದಿಸುತ್ತಾಳೆ – ಒಂದು ದುಬಾರಿ ಷರತ್ತಿನೊಂದಿಗೆ.

ಎರಡು ವರ್ಷ ಹಿಂದೆ 'ಸಂಗತಿ ಅರಿನ್ಯಾ' ನಾಟಕದೊಂದಿಗೆ ಹೆಗ್ಗೋಡಿಗೆ ಬಂದಿದ್ದ ಪರ್ಚ್ ಈಗ ತನ್ನ ಈ ಹೊಸ ಪ್ರಯೋಗದೊಂದಿಗೆ ಬರುತ್ತಿದೆ.

**ಸಂಜೆ ೭ ಗಂಟೆಗೆ**

not to be printed
Page 8

**ಅಕ್ಟೋಬರ್ ೯ ಶನಿವಾರ**

photo to be printed here
see cd for the photo with this file no.

# 09CC10

ಶಾಸ್ತ್ರೀಯ ನೃತ್ಯ

## ವಿ। ವೈಜಯಂತಿ ಕಾಶಿ

ಮತ್ತು ಶಾಂಭವಿ ನೃತ್ಯಶಾಲೆ, ಬೆಂಗಳೂರು

ತಂಡದ ಕಲಾವಿದರಿಂದ

ನೃತ್ಯಕಲಾವಿದೆಯಾಗಿ, ನೃತ್ಯಯೋಜಕಿ ಮತ್ತು ಶಿಕ್ಷಕಿಯಾಗಿ ಹಾಗೂ ನೃತ್ಯ ಮೊದಲಾದ ಕಲೆಗಳನ್ನು ಕುರಿತು ಸಂಶೋಧಕಿಯಾಗಿ ಕೆಲಸ ಮಾಡಿರುವ ವೈಜಯಂತಿ ಕಾಶಿ ಅವರು ನಾಡಿನ ಹೆಸರಾಂತ ಕಲಾವಿದರಲ್ಲೊಬ್ಬರು. ಎಳೆವಯಸ್ಸಿನಲ್ಲಿ ಭರತನಾಟ್ಯದ ತರಬೇತಿಯೊಂದಿಗೆ ತಮ್ಮ ನೃತ್ಯ ಮಾಧ್ಯಮದ ಆಸಕ್ತಿಯನ್ನು ಆರಂಭಿಸಿಕೊಂಡ ವೈಜಯಂತಿ ಅವರು ಮುಂದೆ ಪ್ರಸಿದ್ಧ ಕೂಚಿಪುಡಿ ಸಂಪ್ರದಾಯದಿಂದ ಆಕರ್ಷಿತರಾಗಿ ಆ ಮಾರ್ಗದ ಹಲವಾರು ಗುರುಗಳಿಂದ ಮತ್ತು ಪರಿಣತರಿಂದ ತರಬೇತಿ ಪಡೆದರು. ರಂಗನಟಿಯಾಗಿ ಮತ್ತು ಸಂಘಟಕರಾಗಿಯೂ ಕೆಲಸ ಮಾಡಿರುವ ವೈಜಯಂತಿಯವರು ಪ್ರಸ್ತುತ ಬೆಂಗಳೂರಿನಲ್ಲಿ ಕೂಚಿಪುಡಿ ಸಂಪ್ರದಾಯದ ನೃತ್ಯಶಿಕ್ಷಣವನ್ನು ಕೊಡುವ ಶಾಂಭವಿ ನೃತ್ಯಶಾಲೆಯನ್ನು ನಡೆಸುತ್ತಿದ್ದಾರೆ.

ಕಳೆದ ಹತ್ತಾರು ವರ್ಷಗಳಿಂದ ಕರ್ನಾಟಕ ಮತ್ತು ಹೊರಗಿನ ರಾಜ್ಯಗಳಲ್ಲಿ ಸತತವಾಗಿ ನೃತ್ಯ ಕಾರ್ಯಕ್ರಮಗಳನ್ನು ನೀಡುತ್ತ ಬಂದಿರುವ ಇವರು ದೇಶದ ಬಹುತೇಕ ಪ್ರಸಿದ್ಧ ಉತ್ಸವಗಳಲ್ಲಿ ಪಾಲ್ಗೊಂಡಿದ್ದಾರೆ; ಅಮೇರಿಕಾ, ಕೆನಡಾ ಮತ್ತು ಹಲವಾರು ಐರೋಪ್ಯ ದೇಶಗಳೂ ಸೇರಿದಂತೆ ಹಲವು ಪ್ರಮುಖ ಸ್ಥಳಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕಳೆದ ವರ್ಷ ಪ್ರತಿಷ್ಠಿತ ಸಂಗೀತನಾಟಕ ಆಕಾಡೆಮಿ ಪ್ರಶಸ್ತಿಯನ್ನು ಪಡೆದಿರುವ ಇವರಿಗೆ ಈವರೆಗೆ ಹಲವು ಮನ್ನಣೆಗಳೂ ಪುರಸ್ಕಾರಗಳೂ ದೊರೆತಿವೆ.

ಈ ಕಾರ್ಯಕ್ರಮದಲ್ಲಿ ವೈಜಯಂತಿಯವರೊಂದಿಗೆ ಅವರ ಮಗಳು ಪ್ರತೀಕ್ಷಾ ಕಾಶಿ ಹಾಗೂ ಅವರ ತಂಡದ ಸಹಕಲಾವಿದರು ಜತೆಯಾಗಿದ್ದಾರೆ.

**ಸಂಜೆ ೭ ಗಂಟೆಗೆ**